## ನಾಯಿ ಆಹಾರದ ರುಚಿ ನೋಡುವವರು!

**ಸಂಬಳ: ವರ್ಷಕ್ಕೆ ₹ 36 ಲಕ್ಷ**

ಪಾಶ್ಚಾತ್ಯ ರಾಷ್ಟ್ರಗಳ ಪ್ರತಿ ಮನೆಯಲ್ಲೂ ನಾಯಿ ಸಾಕುವುದು ಸಾಮಾನ್ಯ. ಅವುಗಳಿಗೆ ಇಷ್ಟವಾಗುವ ಆಹಾರ ತಯಾರಿಸುವ ಸಂಸ್ಥೆಗಳು ಹಲವು ಇವೆ. ಆ ಸಂಸ್ಥೆಗಳು ತಮ್ಮ ಉತ್ಪನ್ನಗಳ ರುಚಿ ಪರಿಶೀಲಿಸುವುದಕ್ಕೆ ರುಚಿತಜ್ಞರನ್ನು ನೇಮಿಸಿಕೊಳ್ಳುತ್ತವೆ. ಅವರಿಗೆ ಉತ್ತಮ ವೇತನಭತ್ಯೆಗಳನ್ನು ಕೊಡುತ್ತಿವೆ. ಸಂಸ್ಥೆ ತಯಾರಿಸಿದ ಆಹಾರ ನಾಯಿಗಳಿಗೆ ರುಚಿಸುತ್ತದೆಯೊ ಇಲ್ಲವೋ ಎಂಬುದನ್ನು ಪರಿಶೀಲಿಸುವುದೇ ಅವರ ಕೆಲಸ.






## ಕಸ ಪರಿಶೀಲಿಸುವವ

**ಸಂಬಳ: ಗಂಟೆಗೆ ₹ 1,230**

ಜರ್ಮನಿಯವರು ಕಸದ ಬಗ್ಗೆ ಉದಾಸೀನ ಮಾಡುವುದಿಲ್ಲ. ಅದರಲ್ಲಿರುವ ಹಾನಿಕಾರ ವಸ್ತುಗಳನ್ನು ಪತ್ತೆ ಮಾಡಲು ಹೊಸ ಉದ್ಯೋಗವನ್ನು ಸೃಷ್ಟಿಸಿದ್ದಾರೆ. ಈ ಕೆಲಸ ಏನೆಂದರೆ, ಅಪಾರ್ಟ್‌ಮೆಂಟ್‌ಗಳಲ್ಲಿನ ಕಸವನ್ನು ಪರಿಶೀಲಿಸುವುದು. ಅನುಮಾನಾಸ್ಪಾದ ವಸ್ತುಗಳು ಕಂಡ ಕೂಡಲೇ ಪೊಲೀಸರಿಗೆ, ಸಂಬಂಧಪಟ್ಟವರಿಗೆ ತಿಳಿಸಬೇಕು.

## ಬಾಡಿಗೆ ಪ್ರಿಯಕರ

**ಸಂಬಳ: ಗಂಟೆಗೆ ₹ 3,100**

ಸಂಜೆ ಹೊತ್ತು ಹಾಯಾಗಿ ಕಾಲ ಕಳೆಯಬೇಕೆಂದರೆ, ಜಪಾನ್‌ನಲ್ಲಿ ಬಾಡಿಗೆ ಪ್ರಿಯಕರ ಸಿಗುತ್ತಾನೆ. ಇದನ್ನು ರೆಂಟ್ ಎ ಬಾಯ್ ಫ್ರೆಂಡ್' ಉದ್ಯೋಗ ಎನ್ನುತ್ತಾರೆ. ಈ ಕೆಲಸ ಮಾಡುವವರ ಸಂಖ್ಯೆ ಅಲ್ಲಿ ಏರುಮುಖದಲ್ಲಿದೆ. ದಿನದಲ್ಲಿ ಎರಡು ಅಥವಾ ಮೂರು ಗಂಟೆ ಹೊತ್ತು ಆ ಹುಡುಗರನ್ನು ವನಿತೆಯರು ಬಾಡಿಗೆಗೆ ಪಡೆಯುತ್ತಾರೆ! ಈ ಹೊತ್ತಲ್ಲಿ ಅವರು ಅವರ ನಿಜವಾದ ಪ್ರಿಯಕರನಂತೆಯೇ ವರ್ತಿಸಬೇಕು. ಅವರ ಮನಸಿಗೆ ಇಷ್ಟವಾಗುವ ಕೆಲಸಗಳನ್ನಷ್ಟೇ ಮಾಡಬೇಕು. ಇದಕ್ಕೆ ವಿರುದ್ಧವಾಗಿ ರೆಂಟ್ ಎ ಗರ್ಲ್‌ಫ್ರೆಂಡ್ ಹೆಸರಿನಲ್ಲಿ ಬಾಡಿಗೆ ಪ್ರೇಯಸಿಯನ್ನು ಪಡೆಯುವ ಸಂಸ್ಕೃತಿಯೂ ಆರಂಭವಾಗಿದ್ದು, ಚೀನಾದಲ್ಲಿ ಇದು ಸದ್ದು ಮಾಡುತ್ತಿದೆ. ಆದರೆ, ಇಬ್ಬರೂ ಮಿತಿ ಮೀರುವಂತಿಲ್ಲ ಎಂದು ಹುಡುಗರನ್ನು ಬಾಡಿಗೆಗೆ ಪೂರೈಸುವ ಸಂಸ್ಥೆಯವರು ಷರತ್ತು ವಿಧಿಸಿದ್ದಾರೆ.





## ನಕಲಿ ಕ್ಲೈಂಟ್

**ಸಂಬಳ: ದಿನಕ್ಕೆ ₹ 10,300**

ಚೀನಾದ ಕೆಲವು ಸಂಸ್ಥೆಗಳು, ವಿದೇಶಿ ಕ್ಲೈಂಟ್‌ಗಳನ್ನು ಬಾಡಿಗೆಗೆ ಪಡೆಯುತ್ತಿವೆ. ಇವರ ಕೆಲಸವೇನೆಂದರೆ, ಆಕರ್ಷಕವಾಗಿ ಕಾಣುವಂತೆ ಉಡುಪು ಧರಿಸಿ, ಕಚೇರಿಯಲ್ಲಿ ಏನೋ ದೊಡ್ಡ ಕೆಲಸ ಮಾಡುತ್ತಿರುವಂತೆ ವರ್ತಿಸಬೇಕು, ಕಾಲುಸುಟ್ಟ ಬೆಕ್ಕಿನಂತೆ ಅತ್ತಿತ್ತ ಅಡ್ಡಾಡ್ಡುತ್ತಾ ಫೋಸ್ ಕೊಡಬೇಕು. ನಮ್ಮ ಸಂಸ್ಥೆಗೆ ಹಲವು ವಿದೇಶಿ ಗ್ರಾಹಕರಿದ್ದಾರೆ ಎಂದು ಬಿಂಬಿಸುವುದಕ್ಕಷ್ಟೇ ಈ ನಾಟಕವೆಲ್ಲ!

## ಪಾಂಡಾಗಳನ್ನು ನೋಡಿಕೊಳ್ಳುವವರು

**ಸಂಬಳ: ವರ್ಷಕ್ಕೆ ₹ 22 ಲಕ್ಷ**

ಅಳಿವಿನಂಚಿನಲ್ಲಿರುವ ವಿಶ್ವದ ಅಪರೂಪದ ಪ್ರಾಣಿಗಳಲ್ಲಿ ಒಂದಾದ ಪಾಂಡಾಗಳ ರಕ್ಷಣೆಗೆ ಪಣ ತೊಟ್ಟಿರುವ ಚೀನಾ ಸರ್ಕಾರ ಅವುಗಳ ರಕ್ಷಣೆಗೆ ಹಲವು ಕ್ರಮಗಳನ್ನು ಕೈಗೊಂಡಿದೆ. ಇದರ ಭಾಗವಾಗಿ ಚೀನಾದ 'ಪಾಂಡಾ ಪ್ರೊಟೆಕ್ಷನ್ ಆ್ಯಂಡ್ ರಿಸರ್ಚ್ ಸಂಸ್ಥೆ'ಯವರು ಪಾಂಡಾಗಳನ್ನು ನೋಡಿಕೊಳ್ಳುವವರ ಉದ್ಯೋಗವನ್ನು ಸೃಷ್ಟಿಸಿದ್ದಾರೆ. ಈ ಕೆಲಸಕ್ಕಾಗಿ ಲಕ್ಷಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ.

